ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು,
ನೃಪತುಂಗ ರಸ್ತೆ, ಬೆಂಗಳೂರು-560 001

ಸಂಖ್ಯೆ: ಸಿ1(7) ಸ್ವ.ಚಾ.ಬ:158/2009-10 (ಹಂತ-4) ದಿನಾಂಕ:-05-08-2011

**-: ಅಧಿಕೃತ ಜ್ಞಾಪನ :-**

ವಿಷಯ:-ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ

ಉಲ್ಲೇಖ:-1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 4 ಎಸ್‌ಡಿಇ 2005 ದಿ:-04-04-2005
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಇ.ಡಿ 703 ಡಿ.ಪಿ.ಐ 2006, ದಿನಾಂಕ:-03-07-2007 ಮತ್ತು ಇ ಡಿ 111 ಡಿ. ಪಿ.ಐ 2008, ದಿನಾಂಕ:-30-10-2008
3) ಸರ್ಕಾರದ ಅಧಿಸೂಚನೆ ಸಂಖ್ಯೆ: ಇ.ಡಿ.250: ಡಿ.ಪಿ.ಐ 2006 ದಿನಾಂಕ:-22-02-2008
4) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 464: ಡಿ.ಪಿ.ಐ 2008 ದಿನಾಂಕ:-06-01-2009
5) ಸರ್ಕಾರದ ಆದೇಶದ ಸಂಖ್ಯೆ: ಎಫ್‌ಡಿ 25 ಎಸ್‌ಆರ್‌ಪಿ 91 ದಿನಾಂಕ:-01-02-1993
6) ದಿ:-29-07-2011 ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಗಳು

********

**ಪ್ರಸ್ತಾವನೆ:**

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಬಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರಾತಿಯನ್ನು ಇದುವರೆಗೆ ಗ್ರೂಪ್-ಬಿ ನೇಮಕಾತಿ ಪ್ರಾಧಿಕಾರವಾಗಿದ್ದ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತಿತ್ತು.

ಉಲ್ಲೇಖ: (1) ರ ಸರ್ಕಾರದ ಅಧಿಸೂಚನೆ ಪ್ರಕಾರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರನ್ನು ಪ್ರೌಢಶಾಲಾ ಮುಖ್ಯ ಶಿಕ್ಷಕರು ವೃಂದದ (ಗ್ರೂಪ್-ಬಿ) ಅಧಿಕಾರಿಗಳ ನೇಮಕಾತಿ ಪ್ರಾಧಿಕಾರ ಎಂದು ನೇಮಿಸಿ ಸರ್ಕಾರವು ಆದೇಶ ಹೊರಡಿಸಿದೆ.

ಉಲ್ಲೇಖ (5) ರ ಸರ್ಕಾರದ ಆದೇಶದಲ್ಲಿ ಕಲ್ಪಿಸಿರುವ ಅವಕಾಶದ ಮೇರೆಗೆ ಸ್ವಯಂಚಾಲಿತ ವೇತನ ಬಡ್ತಿ ಪಡೆದ ನಂತರ ಸ್ಥಾನವನ್ನ ಬಡ್ತಿಯ ವೇತನ ಶ್ರೇಣಿಯಲ್ಲಿ ವೇತನ ನಿಗಧಿಗೊಳಿಸುವಂತೆ ಕೋರಿ ನಿಗದಿತ ಅವಧಿಯೊಳಗೆ ಅಭಿಮತ ಪತ್ರ ಸಲ್ಲಿಸಿರುತ್ತಾರೆ. ಅಂತಹ ಅಧಿಕಾರಿಗಳು 15 ವರ್ಷಗಳ ನಿರಂತರ ಸೇವೆಯನ್ನು ಒಂದೇ ಹುದ್ದೆಯಲ್ಲಿ ಸಲ್ಲಿಸಿರುವುದರಿಂದ ಸ್ವಯಂಚಾಲಿತ ವೇತನ ಬಡ್ತಿಗೆ ಅರ್ಹರಿರುತ್ತಾರೆ.

ಅಂತಹ ಅರ್ಹ ಅಧಿಕಾರಿಗಳು ಅವರ ಮೇಲಾಧಿಕಾರಿಗಳ ಮೂಲಕ ಅಗತ್ಯ ದಾಖಲೆ ಮತ್ತು ಮಾಹಿತಿಗಳನ್ನು ಈ ಕಛೇರಿಗೆ ಸಲ್ಲಿಸಿರುವುದನ್ನು ದಿನಾಂಕ:-29-07-2011ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ಮುಂದೆ ಮಂಡಿಸಿ ಕೂಲಂಕಶವಾಗಿ ಪರಿಶೀಲಿಸಲಾಯಿತು.

ಸ್ವಯಂಚಾಲಿತ ವೇತನ ಬಡ್ತಿಯನ್ನು ಮಂಜೂರು ಮಾಡಲು ಅಗತ್ಯ ದಾಖಲೆಗಳಾದ 10 ವರ್ಷಗಳ ಕಾಲಮಿತಿ ಬಡ್ತಿ ಮಂಜೂರಾತಿ ಆದೇಶಗಳು, 05 ವರ್ಷದ ಕಾರ್ಯ ನಿರ್ವಹಣಾ ವರದಿಗಳು/ ವಿಶೇಷ ವರದಿಗಳು ಹಾಗೂ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ದಾಖಲೆಗಳನ್ನು ಪರಿಶೀಲಿಸಿ ಎಲ್ಲಾ ದಾಖಲೆಗಳು ಸಮರ್ಪಕವಾಗಿದ್ದು ಸ್ವಯಂಚಾಲಿತ

ವೇತನ ಬಡ್ತಿಗೆ ಅರ್ಹರಿರುವುದರಿಂದ ಹಾಲಿ ಇರುವ ವೇತನ ಶ್ರೇಣಿ ರೂ:-12000-22650 ರಿಂದ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಶ್ರೇಣಿ ರೂ:-13000-23850 ರಲ್ಲಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ:**

ಉಲ್ಲೇಖಿತ ಸರ್ಕಾರದ ಆದೇಶಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವೃಂದಕ್ಕೆ ಸೇರಿದ ಗ್ರೂಪ್-ಬಿ ಹುದ್ದೆಯಲ್ಲಿ ಯಾವುದೇ ಬಡ್ತಿ ಇಲ್ಲದೆ ನಿರಂತರವಾಗಿ 15 ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ಹಾಗೂ ಕೆಲವು ಅಧಿಕಾರಿಗಳು ಶಿಕ್ಷಣಾಧಿಕಾರಿ ವೃಂದಕ್ಕೆ ಬಡ್ತಿ ಹೊಂದಿದ್ದರೂ ಹಳೆಯ ವೇತನ ಶ್ರೇಣಿಯಲ್ಲಿ ಮುಂದುವರೆಯಲು ಅಭಿಮತ ಪತ್ರ ನೀಡಿರುವುದರಿಂದ ಈ ಕೆಳಗಿನ ತಖ್ತೆಯಲ್ಲಿ ವಿವರಿಸಿದ 12 ಅಧಿಕಾರಿಗಳಿಗೆ ಅವರ ಹೆಸರಿನ ಮುಂದೆ ಸೂಚಿಸಿರುವ ದಿನಾಂಕ ಮತ್ತು ವೇತನ ಶ್ರೇಣಿಯಲ್ಲಿ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿಯನ್ನು ಮಂಜೂರು ಮಾಡಿದೆ.

| ಕ್ರ.ಸಂ | ಅಧಿಕಾರಿಗಳ ಹೆಸರು, ಪದನಾಮ ಹಾಗೂ ಸೇವೆ ಸಲ್ಲಿಸುತ್ತಿರುವ ಕಛೇರಿ ವಿಳಾಸ | ಗ್ರೂಪ್-ಬಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡಿದ ದಿನಾಂಕ | ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ | 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಯಲ್ಲಿ ನಿಗಧಿ ಪಡಿಸಿದ ವೇತನ ಶ್ರೇಣಿ |
|---|---|---|---|---|---|
| 01 | ಜಿ. ಆರ್ ತಿಪ್ಪೇಶಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಚನ್ನಗಿರಿ, ದಾವಣಗೆರೆ ಜಿಲ್ಲೆ | 19-01-1994 | 19-01-2009 | 12000-22650 | 13000-23850 |
| 02 | ಕೆ. ಜಿ ರಂಗಯ್ಯ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಹೊಸಕೆರೆಹಳ್ಳಿ ಬೆಂಗಳೂರು | 13-01-1994 | 13-01-2009 | 12000-22650 | 13000-23850 |
| 03 | ಶ್ರೀ ಟಿ. ಶ್ರೀಕಂಠೇಶ್ವರ, ಹಿರಿಯ ಉಪನ್ಯಾಸಕರು, ಡಯಟ್, ಚಿಕ್ಕಮಗಳೂರು | 17-01-1994 | 17-01-2009 | 12000-22650 | 13000-23850 |
| 04 | ಕೆ ಆರ್ ನರಸಿಂಹ ಮೂರ್ತಿ, ಹಿರಿಯ ಉಪನ್ಯಾಸಕರು, ಡಯಟ್ ರಾಮನಗರ | 13-01-1994 | 13-01-2009 | 12000-22650 | 13000-23850 |
| 05 | ಎಸ್ ಗೀತಾ, ಹಿರಿಯ ಸಹಾಯಕ ನಿರ್ದೇಶಕರು, (ನಿ-32) ಡಿ.ಎಸ್.ಇ.ಆರ್.ಟಿ ಹೊಸಕೆರೆಹಳ್ಳಿ ಬೆಂಗಳೂರು | 17-01-1994 | 17-01-2009 | 12000-22650 | 13000-23850 |
| 06 | ಎಂ ನಾಗರಾಜು, ಕ್ಷೇತ್ರ ಶಿಕ್ಷಣಾಧಿಕಾರಿಗಳು, (ನಿ-32) ಸಾಗರ, ಶಿವಮೊಗ್ಗ ಜಿಲ್ಲೆ | 13-01-1994 | 13-01-2009 | 12000-22650 | 13000-23850 |
| 07 | ಬಿ.ಹೆಚ್ ಕೋಮಾರಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿಗಳು, (ನಿ-32) ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ಹಾಸನ | 29-01-1994 | 29-01-2009 | 12000-22650 | 13000-23850 |

| | | | | | |
|---|---|---|---|---|---|
| 08 | ಹೆಚ್.ಕೆ ಪಾಂಡು, ಶಿಕ್ಷಣಾಧಿಕಾರಿಗಳು, (ನಿ–32) ಹಿರಿಯ ಉಪನ್ಯಾಸಕರು, ಡಯಟ್, ಕೊಡಗು | 02–02–1994 | 02–02–2009 | 12000–22650 | 13000–23850 |
| 09 | ಗೋವಿಂದೇಗೌಡ ಬಿ. ಹಿರಿಯ ಸಹಾಯಕ ನಿರ್ದೇಶಕರು (ನಿ–32) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು | 13–01–1994 | 13–01–2009 | 12000–22650 | 13000–23850 |
| 10 | ಎ. ಬಿ ಪುಟ್ಟಸ್ವಾಮಿ ಗೌಡ, ಕ್ಷೇತ್ರ ಶಿಕ್ಷಣಾಧಿಕಾರಿಗಳು, (ನಿ–32) ಕೆ ಆರ್ ಪೇಟೆ ತಾ, ಮಂಡ್ಯ ಜಿಲ್ಲೆ | 21–01–1994 | 21–01–2009 | 12000–22650 | 13000–23850 |
| 11 | ನಂಜುಂಡಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿಗಳು, (ನಿ–32) ದಕ್ಷಿಣ ವಲಯ–4, ಕೆ. ಆರ್ ಪುರ ಬೆಂ–36 | 18–01–1994 | 18–01–2009 | 12000–22650 | 13000–23850 |
| 12 | ಬಿ. ಜೆ ಪ್ರಭು ಸ್ವಾಮಿ, ಶಿಕ್ಷಣಾಧಿಕಾರಿಗಳು, (ನಿ–32) ಉಪನಿರ್ದೇಶಕರ ಕಛೇರಿ, ತುಮಕೂರು | 24–01–1994 | 24–01–2009 | 12000–22650 | 13000–23850 |

**(ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟ್ಟಿದೆ)**

(ಎಸ್.ಬಿ ಪಾಟೀಲ್)
ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ:–

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಅವಗಾಹನೆಗಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಅಪರ ಆಯುಕ್ತರು, ಧಾರವಾಡ ಇವರಿಗೆ ಮಾಹಿತಿಗಾಗಿ
3. ಮಹಾ ಲೇಖಪಾಲರು, ಕರ್ನಾಟಕ ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರುಗಳಿಗೆ ಮಾಹಿತಿಗಾಗಿ
5. ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಮಾಹಿತಿಗಾಗಿ
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗೀಯ ಸಹ ನಿರ್ದೇಶಕರುಗಳಿಗೆ/ ಸಿ.ಟಿ.ಇ. ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ
7. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಉಪ ನಿರ್ದೇಶಕರುಗಳಿಗೆ ಮಾಹಿತಿಗಾಗಿ
8. ಸಂಬಂಧಿಸಿದ ಅಧಿಕಾರಿಗಳಿಗೆ
9. ಕಛೇರಿ ಪ್ರತಿ